

## ವಿದ್ಯಾ ಬಾಲನ್ ಹೇಳಿದಷ್ಟು ಸುಲಭವಲ್ಲ..!

‘ಸರ್ಕಾರ ದುಡ್ಡು ಕೊಟ್ಟರೂ ಕಟ್ಟಿಕೊಳ್ಳಲು ಜನರಿಗೇನು ಕಷ್ಟ..’ ಎಂದು ಸರಳವಾಗಿ ನಾವಂದುಕೊಳ್ಳಬಹುದು. ಆದರೆ ಅದು ವಿದ್ಯಾ ಬಾಲನ್ ಜಾಹೀರಾತಿನಲ್ಲಿ ಹೇಳುವಷ್ಟು ಸಲೀಸಿಲ್ಲ. ಮೊದಲಿಗೆ ೨೦೧೨ರಲ್ಲಿ ಮಾಡಿದ ಬೇಸ್‌ಲೈನ್ ಸಮೀಕ್ಷೆಯಲ್ಲಿ ಶೌಚಾಲಯವಿಲ್ಲದ ಎಪಿಎಲ್ ಅಥವಾ ಬಿಪಿಎಲ್ ಕುಟುಂಬದ ಹೆಸರಿರಬೇಕು. ಪಂಚಾಯಿತಿಗೆ ಅರ್ಜಿ ಕೊಡಬೇಕೆಂದರೆ ಪಡಿತರ ಚೀಟಿ, ಬ್ಯಾಂಕ್ ಪಾಸ್ಬುಕ್, ಕಟ್ಟಲು ಜಾಗ ಇರಬೇಕು. ಅರ್ಜಿ ಕೊಟ್ಟ ನಂತರ ಪಂಚಾಯಿತಿಯವರು ಸ್ಥಳ ಪರಿಶೀಲನೆ ಮಾಡಿ, ಜಿಪಿಎಸ್ ಮೊಬೈಲಿನಿಂದ ಫೋಟೋ ತೆಗೆದುಕೊಂಡು, ಮಂಜೂರಾತಿ ಕೊಡಬೇಕು. ಕಟ್ಟಿ ಮುಗಿಸಿದ ಮೇಲೆ ಅವರು ಬಂದು ಇನ್ನೊಮ್ಮೆ ಪರಿಶೀಲನೆ ಮಾಡಿ, ಅದನ್ನು ಪಂಚಾಯಿತಿಯ ಪಂಚತಂತ್ರಕ್ಕೆ ಅಪ್‌ಲೋಡ್ ಮಾಡಿ, ಎಲ್ಲ ಸರಿಯಾಗಿದ್ದರೆ, ಹಣ ಮಂಜೂರಾಗುತ್ತದೆ. ಕಟ್ಟಿಸಿದ ೨–೩ ತಿಂಗಳಿಗೇ ಹಣ ಮಂಜೂರಾಗಬಹುದು, ಅಥವಾ ಫಂಡ್ ಸಮಸ್ಯೆ ಇದೆ ಎಂದು ಮುಂದೂಡುತ್ತಲೇ ಹೋಗಬಹುದು.

ಶೌಚಾಲಯ ನಿರ್ಮಾಣಕ್ಕೆ ಜನ ಮುಂದಾಗದೇ ಇರುವುದಕ್ಕೆ ಹಳ್ಳಿಗಳ ಇನ್ನೂ ಎಷ್ಟೋ ಜನರಿಗೆ ಈ ಇಡೀ ಪ್ರಕ್ರಿಯೆಯ ಕುರಿತು ಮಾಹಿತಿ ಇಲ್ಲದಿರುವುದು ಒಂದು ಕಾರಣವಾದರೆ; ದಾಖಲೆಗಳ ಪರಿಶೀಲನೆ, ಮಂಜೂರಾತಿ ಪ್ರಕ್ರಿಯೆಯುಗಳಲ್ಲಿನ ವಿಳಂಬ ಇನ್ನೊಂದು ಕಾರಣ. ಇಷ್ಟೆಲ್ಲ ಪರಿಶೀಲನೆಗಳು ಬೇಕೆ ಎಂದು ಕೇಳಬೇಡಿ. ಇಷ್ಟೆಲ್ಲ ಪರಿಶೀಲನೆಗಳ ನಂತರವೇ ಪ್ರೋತ್ಸಾಹಧನ ಮಂಜೂರಾದರೂ ಶೌಚಾಲಯಗಳನ್ನು ಬರೀ ದಾಖಲೆಗಳಲ್ಲಿ ತೋರಿಸಿ, ಏನೂ ಕಟ್ಟದೇ ಹಣ ಮಂಗಮಾಯ ಮಾಡಿರುವುದನ್ನು ನಮ್ಮ ರಾಜ್ಯದಲ್ಲಿ ಎಸ್‌ಬಿಎಂ ಸಾಮಾಜಿಕ ತಃಖ್ತೆ (ಸೋಷಿಯಲ್ ಆಡಿಟ್) ತೋರಿಸಿದೆ.

ದೇಶಾದ್ಯಂತ ಜನ ಜಾಗೃತಿ ಮೂಡಿಸಲು ಮಾಹಿತಿ ಮತ್ತು ಸಂವಹನಕ್ಕೆ ವ್ಯಯಿಸಿದ ಹಣಕ್ಕೆ ಹೋಲಿಸಿದರೆ (೧೨೧ ಕೋಟಿ ರೂಪಾಯಿ) ೨೦೧೪೧೫ರಲ್ಲಿ ಪ್ರಧಾನಿಯವರ ಎಸ್‌ಬಿಎಂ ಜಾಹೀರಾತಿಗೆ ಖರ್ಚು ಮಾಡಿದ ಹಣವೂ ಕಡಿಮೆಯೇನಲ್ಲ, ಬರೋಬ್ಬರಿ ೯೪ ಕೋಟಿ ರೂಪಾಯಿ! ಇಷ್ಟೆಲ್ಲ ಆದರೂ ಶೌಚಾಲಯ ನಿರ್ಮಾಣ, ಬಳಕೆಯನ್ನು ನೋಡಿದರೆ, ಫಲಿತಾಂಶ ಖಂಡಿತಾ ತೃಪ್ತಿದಾಯಕವಾಗಿಲ್ಲ.



ಮೊದಲು ತುಂಬ ಕಡಿಮೆ ಇದ್ದ ಪ್ರೋತ್ಸಾಹ ಧನವನ್ನು 2012ರಲ್ಲಿ ಹತ್ತು ಸಾವಿರ ರೂಪಾಯಿಗೆ ಏರಿಸಿ, ಎಸ್‌ಬಿಎಂ ಅಡಿಯಲ್ಲಿ ಹನ್ನೆರಡು ಸಾವಿರಕ್ಕೆ ಏರಿಸಲಾಗಿದೆ. ಸುಮಾರು 27 ವರ್ಷಗಳಿಂದ ಹೀಗೆ ಜನಜಾಗೃತಿ, ಪ್ರೋತ್ಸಾಹಧನ ಏನೆಲ್ಲ ಪ್ರಯತ್ನಗಳ ನಂತರವೂ ಯಾಕೆ ದೇಶದ ಅರ್ಧದಷ್ಟು ಕುಟುಂಬಗಳು ಶೌಚಾಲಯ ಕಟ್ಟಿಸಿಕೊಂಡಿಲ್ಲ? ಮನುಷ್ಯನೊಬ್ಬನಿಗೆ ಅತ್ಯಂತ ಖಾಸಗಿಯಾಗಿ ಮಾಡಬೇಕೆಂದೆನ್ನಿಸುವ ಈ ಶೌಚದಂತಹ ಕ್ರಿಯೆಯನ್ನು ಬಯಲಿನಲ್ಲಿ ಮಾಡುವ ಅನಿವಾರ್ಯತೆ, ಸಂಕಷ್ಟವಾದರೂ ಏನು?

—ಈ ಪ್ರಶ್ನೆಗೆ ಉತ್ತರಗಳು ಹಲವಾರು ಮತ್ತು ಅಷ್ಟೇ ಸಂಕೀರ್ಣ. ಕಳೆದ ವರ್ಷ ಸ್ವಚ್ಛ ಭಾರತ ಮಿಶನ್(ಗ್ರಾಮೀಣ) ಅಡಿಯಲ್ಲಿ ಶೌಚಾಲಯ ನಿರ್ಮಾಣ ಕುರಿತ ಫೋರ್ತ್ ಲಯನ್ ಮತ್ತು ಆರ್ಘ್ಯಂ ಅಧ್ಯಯನದ ಅನುಭವದಲ್ಲಿ ಕಂಡುಕೊಂಡಿದ್ದು ಇದನ್ನೇ.

### ನಮ್ಮಪ್ಪ ಒಪ್ಪದೇ ಇಲ್ಲ..!

ಜಗಳೂರಿನ ಹಳ್ಳಿಯೊಂದರ ದೊಡ್ಡ ಮನೆ. ಮನೆಯೊಳಗೆ ಇದ್ದಾತ ಬಿಎಡ್ ಪದವೀಧರ, ಹದಿನಾಲ್ಕು ಎಕರೆ ಹೊಲ, ಆರು ಎಕರೆ ನೀರಾವರಿ ತೋಟ, ಎತ್ತು, ಎಮ್ಮೆ, ಕುರಿ, ಬೈಕ್, ಟಿವಿ, ಮೊಬೈಲ್ ಎಲ್ಲ ಇದ್ದವರು. ಆದರೆ ಶೌಚಾಲಯ ಮಾತ್ರ ಇಲ್ಲ ಎಂಬ ವಿವರಗಳು ಒಂದೊಂದಾಗಿ ಹೊರಗೆ ಬರುತ್ತ ನನಗೆ ಅಚ್ಚರಿಯೆನ್ನಿಸಿತು. ಹೆಣ್ಣು ಮಕ್ಕಳು ಹೊರಗೆ ಚೊಂಬು ತೆಗೆದುಕೊಂಡು ಹೋಗುವುದು ವಿದ್ಯಾವಂತವರಿಗಾದರೂ ಏನೂ ಅನ್ನಿಸುವುದಿಲ್ಲವಲ್ಲ ಎನ್ನುವುದು ದಿಗಿಲು ಹುಟ್ಟಿಸುವಂಥದು.

“ನಮ್ಮ ತಂಗಿಯಂದ್ರು ಹೊರಗೆ ಚೆಂಬು ಹಿಡ್ಕಂಡು ಹೋಗೋದು ನೋಡಿದಾಗೆಲ್ಲ ನನಗೆ ಭಾಳ ನೋವಾಗುತ್ರೀ. ಏನು ಮಾಡದು... ನಮ್ಮದು ಕೂಡುಕುಟುಂಬ... ಮನ್ಯಾಗ ನಮ್ಮಪ್ಪನ ಮಾತೇ ಕೊನೆ. ಜಾಗದ ಸಮಸ್ಯೆ ಇಲ್ಲ, ದುಡ್ಡಿನ ಸಮಸ್ಯೆ ಇಲ್ಲ. ಕಟ್ಟಿಸೋಣು ಅಂತಂದ್ರೆ ನಮ್ಮಪ್ಪ ಒಪ್ಪದೇ ಇಲ್ಲ. ಹೊಲ ದೂರ ಇಲ್ಲ, ಪಕ್ಕದಲ್ಲಿರಾದೆ ನಮ್ಮ ಹೊಲ. ಅದ್ಕೇ ನಮ್ಮಪ್ಪ, ಇಷ್ಟ್ ಹತ್ರ ನಮ್ಮದೇ ಹೊಲ ಅದಾಲ್ಲ, ಮತ್ಯಾಕೆ ಅನ್ನೂಹಂಗೆ ಆಡ್ತಾನೆ’ ಎಂದ.

‘ಅಯ್ಯೋ ನಮಗೂ ಸಾಕಾಗಿಬಿಟ್ಟದರಿ... ಪಂಚಾಯಿತಿ ಆಫೀಸೆದುರಿಗೆ ಮನಿ ಬ್ಯಾರೆ. ಈ ಶೌಚಾಲಯ ಕ್ಯಾಂಪೇನ್ ಶುರುವಾದಾಗಿನಿಂದ ಹೇಳ್ತಿದೀವ್ರಿ, ಏನಂದ್ರೂ ಆಸಾಮಿ ಜಗ್ಗಂಗಿಲ್ರೀ. ನಮ್ ಪಂಚಾಯಿತಿ ಒಳಗ ಒಂದ್ ಐವತ್ತು ಹಿಂತಾ ಮನಿನೇ ಇದಾವ್ರಿ.